ಡಾ: ಹೆಚ್.ಸಿ. ಮಹಾದೇವಪ್ಪ : ಸರ್ಕಾರ ತನ್ನ ಆದೇಶದಲ್ಲಿ ಸ್ಪಷ್ಟವಾಗಿ ಹೇಳಬೇಕು. ಮೊಗೇರ ಉತ್ತರ ಕರ್ನಾಟಕದವರು scheduled caste category ಗೆ ಬರುವುದಿಲ್ಲ. ಅವರಿಗೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಮುಗಿಯಿತು.

ಅಧ್ಯಕ್ಷರು : ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಹಾದೇವಪ್ಪನವರೇ ಈಗಾಗಲೇ ಉತ್ತರ ಕೊಟ್ಟಿದೆ.

ಅಧ್ಯಕ್ಷರು : ಈಗ ಅರ್ಧ ಗಂಟೆಗಳ ಕಾಲಾವಧಿ ಚರ್ಚೆ. ಶ್ರೀ ವಿ. ಮುನಿಯಪ್ಪ ಇಲ್ಲ, ಶ್ರೀ ಯು.ಟಿ. ಖಾದರ್ ಇಲ್ಲ, ಶ್ರೀ ಎನ್.ಎ. ಹ್ಯಾರೀಸ್ ಇಲ್ಲ. ಅಪ್ಪಚ್ಚುರಂಜನ್‌ರವರೇ ತಾವು ಒಂದು ನಿಮಿಷ ಇರಿ. ಈಗ ಮಾನ್ಯ ಸಾ.ರಾ. ಮಹೇಶ್‌ರವರು ವಿಷಯ ಗಮನ ಸೆಳೆಯುವ ಸೂಚನೆ ಇದೆ. ಅದನ್ನು ಅವರು ಕೇಳುತ್ತಾರೆ.

2) **ವಿಷಯ : ಮೈಸೂರು ತಾಲ್ಲೂಕು ಸಾಗರಕಟ್ಟೆ ಬಳಿ ಲಕ್ಷ್ಮಣ ತೀರ್ಥ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿ ಬಗ್ಗೆ.**

\- - -

ಶ್ರೀ ಸಾ. ರಾ. ಮಹೇಶ್ : ಮಾನ್ಯ ಅಧ್ಯಕ್ಷರೇ ಮೈಸೂರು ತಾಲ್ಲೂಕು ಸಾಗರಕಟ್ಟೆ ಬಳಿ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಕೆ.ಆರ್.ಡಿ.ಸಿ.ಎಲ್ ವತಿಯಿಂದ 3ನೇ ಹಂತದ ಸೇತುವೆ ನಿರ್ಮಾಣ ಯೋಜನೆಯಡಿಯಲ್ಲಿ ಒಟ್ಟು 360 ಸೇತುವೆಗಳನ್ನು 4 ಪ್ಯಾಕೇಜುಗಳಲ್ಲಿ ನಿರ್ಮಿಸಲು ಒಟ್ಟು ರೂ. 210.00 ಕೋಟಿಗಳ ಮಂಜೂರಾತಿಯನ್ನು ಸರ್ಕಾರದ ಆದೇಶ ಸಂಖ್ಯೆ. ಲೋಇ 51 ಇಎಪಿ 2005 ದಿನಾಂಕ: 23–01–2006 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಮೇಲ್ಕಂಡ 360

ಸೇತುವೆಗಳ ಪೈಕಿ ರೂ. 25 ಲಕ್ಷಗಳ ಅಂದಾಜು ಮೊತ್ತಕ್ಕಿಂತ ಹೆಚ್ಚಿರುವ ಒಟ್ಟು 252 ಸೇತುವೆಗಳನ್ನು 4 ಪ್ಯಾಕೇಜುಗಳಡಿಯಲ್ಲಿ ಕೆ.ಆರ್.ಡಿ.ಸಿ.ಎಲ್ ವತಿಯಿಂದ ತೆಗೆದುಕೊಳ್ಳಲಾಯಿತು. ಮೇಲ್ಕಂಡ 4 ಪ್ಯಾಕೇಜುಗಳಲ್ಲಿ 1 ಮತ್ತು 4 ನ್ನು ಮೆ॥ ಗ್ಯಾಮನ್ ಇಂಡಿಯಾ ಲಿ. ಹಾಗೂ ಪ್ಯಾಕೇಜ–2 ಮತ್ತು 3ನ್ನು ಮೆ॥ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂ. ಲಿ. ರವರಿಗೆ ವಹಿಸಲಾಗಿರುತ್ತದೆ. ಉಳಿಕೆ ರೂ. 25 ಲಕ್ಷಗಳ ಅಂದಾಜು ಮೊತ್ತಕ್ಕಿಂತ ಕಡಿಮೆ ಇದ್ದ ಒಟ್ಟು 108 ಸೇತುವೆಗಳನ್ನು ಸಂಬಂಧಪಟ್ಟ ಲೋಕೋಪಯೋಗಿ ವಿಭಾಗದ ವತಿಯಿಂದ ನಿರ್ವಹಿಸಲು ಯೋಜಿಸಲಾಗಿತ್ತು.

ಮುಂದುವರೆದಂತೆ, ಸರ್ಕಾರದ ಆದೇಶ ಸಂಖ್ಯೆ ಲೋ ಇ 51 ಇಎಪಿ 205 ದಿನಾಂಕ: 25–09–2006 ಮುಖೇನ ಕೆ.ಆರ್.ಡಿ.ಸಿ.ಎಲ್ ವತಿಯಿಂದ 3ನೇ ಹಂತ ಸೇತುವೆ ನಿರ್ಮಾಣದ ಯೋಜನೆಯಡಿಯಲ್ಲಿ ರೂ.10 ಕೋಟಿಗಳ ಅಂದಾಜು ಮೊತ್ತದಲ್ಲಿ ಹೆಚ್ಚುವರಿ ಸೇತುವೆಯನ್ನಾಗಿ ಸದರಿ ಸೇತುವೆಯನ್ನು ತೆಗೆದುಕೊಳ್ಳಲು ಆದೇಶಿಸಲಾಗಿತ್ತು. ಈ ಆದೇಶದಂತೆ ಸದರಿ ಸೇತುವೆ ಕಾಮಗಾರಿಯನ್ನು 3ನೇ ಹಂತದ 4ನೇ ಪ್ಯಾಕೇಜಿನಲ್ಲಿ ತೆಗೆದುಕೊಂಡು ಮೆ॥ ಗ್ಯಾಮನ್ ಇಂಡಿಯಾ ಲಿ ರವರಿಗೆ ದಿನಾಂಕ: 09–10–2006 ರಲ್ಲಿ ವಹಿಸಲಾಗಿದೆ.

ಈ ಸೇತುವೆಯನ್ನು ಕೃಷ್ಣರಾಜಸಾಗರ ಅಣೆಕಟ್ಟಿನ ಹಿನ್ನೀರಿನ ಭಾಗದಲ್ಲಿ ಸಾಗರಕಟ್ಟೆ ಗ್ರಾಮದ ಬಳಿ ಲಕ್ಷ್ಮಣ ತೀರ್ಥ ನದಿಗೆ ಅಡ್ಡಲಾಗಿ ನಿರ್ಮಿಸಲು ಯೋಜಿಸಲಾಗಿದೆ. ಈ ಸೇತುವೆಯು ಎಳವಾಳ, ಗುಂಗರಭತ್ರ, ಹೊಸಕೋಟೆ, ಸಾಗರಕಟ್ಟೆ, ಕಲ್ಲೂರು, ಯಳಚಳ್ಳಿ, ಹಾರುವಳ್ಳಿ, ಆನಂದೂರು, ರಾಮನಹಳ್ಳಿ ಮತ್ತು ಎಡೆಹಳ್ಳಿ ಗ್ರಾಮಗಳನ್ನು ಮೈಸೂರು ದಿಕ್ಕಿಗೆ ಹಾಗೂ ಕಂಟೇನಹಳ್ಳಿ, ಲಾಲನಹಳ್ಳಿ, ಬಸವರಾಜಪುರ, ಲಾಲದೇವನಹಳ್ಳಿ, ಮಾರ್ಚನಹಳ್ಳಿ, ವಡ್ರಹಳ್ಳಿ ಮತ್ತು ಮೂಲೆಪೆಟ್ಲು ಗ್ರಾಮಗಳನ್ನು ಕೆ.ಆರ್. ನಗರದ ಕಡೆಗೆ ಸಂಪರ್ಕ ಕಲ್ಪಿಸಲು ಯೋಜಿಸಲಾಗಿದೆ. ಈ ಸೇತುವೆಯ ಉದ್ದವು 384 ಮೀ ಗಳು, ಹಾಗೂ 32 ಮೀ ಗಳ 12 ಸ್ಪ್ಯಾನುಗಳಿಂದ ವಿನ್ಯಾಸಗೊಳಿಸಲಾಗಿದೆ ಮತ್ತು 12 ಮೀ ಗಳ ಅಗಲದ ಸೇತುವೆಯನ್ನಾಗಿ ಯೋಜಿಸಲಾಗಿದೆ.

ಈ ಸೇತುವೆಯನ್ನು ಮೇಲ್ಕಂಡ ವಿನ್ಯಾಸದ ಪ್ರಕಾರ, ಸ್ಥಳ ಸ್ಥಿತಿ ಹಾಗೂ ಮಣ್ಣಿನ ಪರೀಕ್ಷೆಗಳ ಆಧಾರದ ಮೇರೆಗೆ, ಅಂದಾಜು ಪಟ್ಟಿಯನ್ನು 2006–07 ರಾಷ್ಟ್ರೀಯ ಹೆದ್ದಾರಿ ದರಪಟ್ಟಿಯಂತೆ ರೂ. 32.00 ಕೋಟಿಗಳಿಗೆ

ಪರಿಷ್ಕೃತಗೊಳಿಸಲಾಗಿದೆ. ಈ ಕಾಮಗಾರಿಯನ್ನು ಗುತ್ತಿಗೆದಾರರು ಡಿಸೆಂಬರ್ 2006 ರಲ್ಲಿ ಪ್ರಾರಂಭಿಸಿರುತ್ತಾರೆ. ಪ್ರಸ್ತುತ ಈ ಕಾಮಗಾರಿಯಲ್ಲಿ ಒಟ್ಟು 9 ಕಂಬಗಳ ಅಡಿಪಾಯಗಳು ಮುಗಿದಿದ್ದು, ಸಬ್‌ಸ್ಟ್ರಕ್ಚರ್ ವಿವಿಧ ಹಂತಗಳಲ್ಲಿರುತ್ತವೆ. ಎರಡು ದಿಕ್ಕಿನ ಅಬಟ್‌ಮೆಂಟ್‌ಗಳ ಅಡಿಪಾಯಗಳು ಮುಗಿದಿದ್ದು, ಸಬ್‌ಸ್ಟ್ರಕ್ಚರ್ ವಿವಿಧ ಹಂತಗಳಲ್ಲಿರುತ್ತವೆ. ಉಳಿಕೆ ಎರಡು ಕಂಬಗಳನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ. ಕೆ.ಆರ್.ಎಸ್.ನ ಹಿನ್ನೀರಿನ ಮಟ್ಟವು ಸೇತುವೆಯ ಸ್ಥಳದಲ್ಲಿ ಜೂನ್ 2007 ನಂತರ ತಗ್ಗದೇ ಇದ್ದ ಕಾರಣ. ಈ ಕಾಮಗಾರಿಯು ಜೂನ್ 2007 ರಲ್ಲಿ ಸ್ಥಗಿತಗೊಂಡಿರುತ್ತದೆ. ಈ ಕಾಮಗಾರಿಯ ಸಲುವಾಗಿ ಇಲ್ಲಿಯವರೆಗೂ ರೂ. 7.00 ಕೋಟಿಗಳ ವೆಚ್ಚವಾಗಿರುತ್ತದೆ.

ಸೇತುವೆ ಕಾಮಗಾರಿಯ ಸ್ಥಳದಲ್ಲಿ ಪ್ರಸ್ತುತ ಹಿನ್ನೀರಿನ ಮಟ್ಟ 110.32 ಅಡಿಗಳಾಗಿದ್ದು, ಹಿನ್ನೀರಿನ ಮಟ್ಟವು 82.00 ಅಡಿಗಳಿಗೆ ತಗ್ಗಿದ ಸಮಯದಲ್ಲಿ ಕಾಮಗಾರಿಯನ್ನು ಪುನಃ ಪ್ರಾರಂಭಿಸಬಹುದಾಗಿರುತ್ತದೆ. 2008 ಹಾಗೂ 2009 ಅವಧಿಗಳಲ್ಲಿ ಸದರಿ ಹಿನ್ನೀರಿನ ಮಟ್ಟವು ಕಾಮಗಾರಿಗೆ ಅನುಕೂಲ ವಾಗುವಂತೆ ತಗ್ಗದೇ ಇದ್ದ ಕಾರಣ ಕಾಮಗಾರಿಯನ್ನು ಮುಂದುವರಿ ಸಲಾಗಿಲ್ಲ. ಹಾಗೂ ಈ ಕಾಮಗಾರಿಯ ಮೂಲ ಅನುದಾನದೊಂದಿಗೆ ಹೋಲಿಸಿದಾಗ ರೂ.22 ಕೋಟಿಗಳ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುತ್ತದೆ. ಮುಂದುವರೆದು, ಜಲಾಶಯದ ನೀರಿನ ಮಟ್ಟ ಕಡಿಮೆಯಾದ ನಂತರ ಕಾಮಗಾರಿಯನ್ನು ಪ್ರಾರಂಭಿಸಿ ಶೀಘ್ರವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಾ.ರಾ. ಮಹೇಶ್ : ಮಾನ್ಯ ಅಧ್ಯಕ್ಷರೆ, ಸಚಿವರಾದ ಮಾನ್ಯ ಉದಾಸಿಯವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಹಿಂದಿನ 4ನೇ ಅಧಿವೇಶನದಲ್ಲಿ ದಿನಾಂಕ: 31.05.2010ಕ್ಕೆ ಕಾಮಗಾರಿಯನ್ನು ಪೂರ್ಣಗೊಳಿ ಸುತ್ತೇನೆಂದು ಮಾನ್ಯ ಮಂತ್ರಿಯವರೆ, ನನಗೆ ಮಾಹಿತಿಯನ್ನು ಕಳುಹಿಸಿದ್ದರು. ಅದರ ಪ್ರತಿ ನನ್ನ ಬಳಿ ಇದೆ, ಅದನ್ನು ತಮಗೆ ಕಳುಹಿಸುತ್ತೇನೆ. ಇದರ ಜೊತೆಗೆ ಮಾನ್ಯ ಉದಾಸಿಯವರು ಈ ಸೇತುವೆ ಬಗ್ಗೆ ಏಕೋ ತುಂಬಾ ಉದಾಸೀನ ಮಾಡುತ್ತಿದ್ದಾರೆ. ತಮಗೆ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ, ಈ ಸಾರಿ ನೀರು ಕಡಿಮೆಯಾಗುತ್ತದೆ, ತಾವು ಇದಕ್ಕೆ ಅನುದಾನವನ್ನು ಒದಗಿಸಿಕೊಳ್ಳಿ, ನೀವು ಈ ಸಾರಿ ನೀರು ಕಡಿಮೆಯಾದಾಗ ಅನುದಾನ ವಿಲ್ಲವೆಂದು ಹೇಳಿಬಿಟ್ಟರೆ, ಮತ್ತೆ ಇನ್ನು ಎರಡು ವರ್ಷಗಳು ಮುಂದಕ್ಕೆ

ಹೋದರೆ, ಮತ್ತೆ ವೆಚ್ಚ 30 ಕೋಟಿ ರೂಪಾಯಿಗಳು ಹೆಚ್ಚಾಗುತ್ತದೆ. ಅದಕ್ಕಾಗಿ ತಮಗೆ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ, ಯಾವ ಸರ್ಕಾರ ಬಂದರೂ ಆ ಕಾಮಗಾರಿಯನ್ನು ಮಾಡಲೇಬೇಕು. ಇದರಲ್ಲಿ ಬೇರೆ ಇನ್ನಾರೋ ಮಾಡುವುದರಿಂದ ನಮಗೆ ತೊಂದರೆಯಾಗುತ್ತಿದೆ. ಈ ಸಾರಿ ನೀವು ಅನುದಾನವನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕೆಂದು ಕೋರುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಸಾಗರಕಟ್ಟೆ ಸೇತುವೆ ಆಗುವುದರಿಂದ ಸುಮಾರು 3–4 ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಹಾಸನ ದಿಂದ ಮೈಸೂರಿಗೆ 25 ಕಿ.ಮೀ. ರಸ್ತೆ ಅಂತರ ಕಡಿಮೆಯಾಗಿ ಅನುಕೂಲ ವಾಗುತ್ತದೆ. ಆ ಉದ್ದೇಶದಿಂದ ಮಾಡಿರುವುದು, ಆದುದರಿಂದ ದಯಮಾಡಿ ಕೂಡಲೇ ಮಾಡಬೇಕು, ಮತ್ತೆ ರಸ್ತೆ ಸ್ಟೇಟ್ ಹೈವೇಗೆ ಅಪ್‌ಗ್ರೇಡ್ ಆಗಿದೆ, ಆ ರಸ್ತೆಯನ್ನು ಅಗಲ ಮಾಡಿಸಬೇಕು. ಆ ಸೇತುವೆಗೆ ಎರಡು ಪಿಲ್ಲರ್ ಇದೆ, ಈಗ ಪಿಲ್ಲರ್‌ಗಳನ್ನು ಸಮುದ್ರದಲ್ಲೆ ಮಾಡುವಂಥ ಹೊಸ ಹೊಸ ವಿಧಾನಗಳು ಬಂದಿವೆ. ಮಾನ್ಯ ಉದಾಸಿಯವರು ಈ ಕಾಮಗಾರಿಯ ಬಗ್ಗೆ ಉದಾಸೀನ ಮಾಡದೇ ಇದನ್ನು ಮಾಡಿದರೆ ಅನುಕೂಲವಾಗುತ್ತದೆ. ಇದರಿಂದ ಮಾನ್ಯ ಮಹೇಶ್‌ರವರಿಗೆ ಮತ್ತು ಮೂರು ಜಿಲ್ಲೆಗಳಿಗೂ ಅನುಕೂಲವಾಗುತ್ತದೆಂದು ತಮಗೆ ಮನವಿಯನ್ನು ಮಾಡುತ್ತಿದ್ದೇನೆ. ಆದುದರಿಂದ ದಯಮಾಡಿ ಕೂಡಲೇ ಮಾಡಿಸಿಕೊಡಬೇಕೆಂದು. ಮಾನ್ಯ ಉದಾಸಿಯವರಿಗೆ ಮನವಿಯನ್ನು ಮಾಡುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹೇಶ್‌ರವರು ಹಾಗೂ ಮಾನ್ಯ ರೇವಣ್ಣನವರ ಕಳಕಳಿ ನನಗೆ ಅರ್ಥವಾಗಿದೆ. ಈ ಕಾರ್ಯಕ್ರಮ ಮುಂದುವರಿಯದೇ ಇರುವುದಕ್ಕೆ ಕಾರಣವೇನೆಂದರೆ 2008–09ರಲ್ಲಿ ಹಿನ್ನೀರಿನ ಮಟ್ಟವು ತಗ್ಗದೆ ಇದ್ದುದರಿಂದ ಕಾಮಗಾರಿಯನ್ನು ಮಾಡಲು ಆಗದೇ ಉಳಿದಿದೆ ಎಂಬುದು ಅವರ ಗಮನಕ್ಕೆ ಬಂದಿದೆ. ಈಗ ಮಾನ್ಯ ಮಹೇಶ್‌ರವರಿಗೆ ಬೇಕಾಗಿರುವ ವಿಚಾರವಾಗಿ ಅವರು ಹೇಳುವುದೇ ನೆಂದರೆ ಹಣ ಲಭ್ಯವಿದ್ದರೆ ಕಾಮಗಾರಿಯನ್ನು ಮಾಡುವುದಕ್ಕಾಗುತ್ತದೆಂಬ ಮಾತನ್ನು ಹೇಳಿದ್ದಾರೆ. ಈಗ 22 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ, ಅದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಶೀಘ್ರದಲ್ಲೇ ಕಾಮಗಾರಿಯನ್ನು ನೆರವೇರಿಸುವ ಕೆಲಸವನ್ನು ಮಾಡುತ್ತೇನೆಂಬ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : ಇದು ಮುಗಿಯಿತು, ಈಗ ಮಾನ್ಯ ರೇವಣ್ಣನವರ ಗಮನ ಸೆಳೆಯುವ ಸೂಚನೆ ಇದೆ, ಕೇಳಿ.